ವಿಷಯ: ಸಜಿಪ ಮುನ್ನೂರು ಏತ ನೀರಾವರಿ ಯೋಜನೆ

2838 (4077)

ಶ್ರೀ ಎ.ರುಕ್ಮಯ ಪೂಜಾರಿ (ವಿಟ್ಲ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಜಿಪ ಮುನ್ನೂರು ಏತ ನೀರಾವರಿ ಯೋಜನೆಯಿಂದ ಪ್ರಸ್ತುತ ಎಷ್ಟು ಪ್ರದೇಶದ ಕೃಷಿಗೆ ಪ್ರಯೋಜನವಾಗುವುದು?

ಆ) ಎಷ್ಟು ಪ್ರದೇಶದ ಕೃಷಿಗೆ ಪ್ರಯೋಜನವಾಗಬೇಕಾಗಿತ್ತು?

ಇ) ಹೆಚ್ಚಿನ ಪ್ರದೇಶದ ರೈತರಿಗೆ ಪ್ರಯೋಜನವಾಗುವಂತೆ ಸರ್ಕಾರವು ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 30 ಎಕರೆ.

ಆ) 205 ಎಕರೆ.

ಇ) ಪ್ರಸ್ತುತ ಈ ಯೋಜನೆ ಪಾಣೆ ಮಂಗಳೂರು ರೈತರ ಸೇವಾ ಸಹಕಾರಿ ಸಂಘ ಲಿ., ನವರ ವಶದಲ್ಲಿದೆ, ಈ ಯೋಜನೆಯನ್ನು ಸಣ್ಣ ನೀರಾವರಿ ವಲಯಕ್ಕೆ ಹಸ್ತಾಂತರಗೊಂಡ ನಂತರ ನೀರಾವರಿ ಸೌಲಭ್ಯ ಹೆಚ್ಚಿಸಲು ದುರಸ್ತಿ ಕಾಮಗಾರಿಯನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ವಿಷಯ: ಬಂಟ್ವಾಳ ತಾಲ್ಲೂಕಿನಲ್ಲಿ ವೆಂಟೆಡ್ ಡ್ಯಾಮ್‌ನ ದುರಸ್ತಿ

2839 (4076)

ಶ್ರೀ ಎ.ರುಕ್ಮಯ ಪೂಜಾರಿ (ವಿಟ್ಲ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ತಾಲ್ಲೂಕಿನ ಉಳಿಯ ತಡ್ಕ 'ವೆಂಟೆಡ್ ಡ್ಯಾಮ್'ನ ದುರಸ್ತಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರಿಯಲ್ಲವೆ?

ಇ) ಇದನ್ನು ದುರಸ್ತಿ ಮಾಡಲು ಸರ್ಕಾರವು ತಕ್ಷಣ ಹಣ ಬಿಡುಗಡೆ ಮಾಡಲು ಕ್ರಮ